ಲಾಲ್‌ಬಾಗ್‌ನಲ್ಲಿ ಸಂಗೀತ ನೃತ್ಯಕಾರಂಜಿ

209(127) ಶ್ರೀ ರಾಮಲಿಂಗಾ ರೆಡ್ಡಿ:(ಬಿ.ಟಿ.ಎಂ.ಲೇಔಟ್) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್‌ಬಾಗ್‌ನಲ್ಲಿ ಸಂಗೀತ ನೃತ್ಯ ಕಾರಂಜಿ, ಬೋಟಿಂಗ್ ಇತ್ಯಾದಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಿರುವುದೇ;

ಆ) ಹಾಗಿದ್ದಲ್ಲಿ, ಈ ಯೋಜನೆಗಳ ಅಂದಾಜು ವೆಚ್ಚವೆಷ್ಟು;

ಇ) ಇಲ್ಲಿರುವ ಏಕಶಿಲಾ ಬಂಡೆಗೆ ಧಕ್ಕೆಯುಂಟು ಮಾಡುವ ಕ್ರಮಕ್ಕೆ ಹಾಗೂ ಇದನ್ನು ಮತ್ತೊಂದು ವಂಡರ್ ಲಾ ಮಾಡಲು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇರತಕ್ಕ ಪರಿಸರವನ್ನು ಸಂರಕ್ಷಿಸಿ, ಉದ್ಯಾನವನ್ನು ಸುಚಿಗೊಳಿಸಿ ಹೆಚ್ಚು ಪಹರೆಯನ್ನು ನಿಯೋಜಿಸಿ, ಹೊಸದಾಗಿ ಗಿಡಗಳನ್ನು ನೆಡುವ ಕಾಮಗಾರಿಯನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಉಮೇಶ್ ವಿ. ಕತ್ತಿ(ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ಸಂಗೀತ ನೃತ್ಯ ಕ್ಯಾರಂಜಿ ನಿರ್ಮಿಸುವ ಸಂಬಂಧ ಎಲಾ ಅಸಕ್ತ ಚಿಂತಕರ ಅಭಿಪ್ರಾಯ ಆಧರಿಸಿ ಅನುಷ್ಠಾನಗೊಳಿಸುವ ಬಗ್ಗೆ ಇನ್ನೂ ನಿರ್ಧರಿಸಬೇಕಾಗಿದೆ. ಬೋಟಿಂಗ್ ಕಾರ್ಯಕ್ರಮ ಕೈಗೊಳ್ಳುವ ಪ್ರಸ್ತಾವಣೆ ಇರುವುದಿಲ್ಲ.

ಆ) ಅಂತಿಮ ನಿರ್ಧಾರದ ನಂತರ ತಯಾರಿಸಲಾಗುವುದು.

ಇ)ಹೌದು.

ಆದರೆ ಇಲ್ಲಿರುವ ಏಕಶಿಲಾ ಬಂಡೆಗೆ ಧಕ್ಕೆಯನ್ನುಂಟು ಮಾಡುವ ಹಾಗೂ ವಂಡರ್‌ಲಾ ಮಾಡುವ ಯಾವುದೇ ಉದ್ದೇಶವು ಇರುವುದಿಲ್ಲ.

ಈ) ಹೌದು.

ವಿಚಾರಣಾಧೀನ ಕೈದಿಗಳು

210(406) ಶ್ರೀ ರೇವಣ್ಣ ಹೆಚ್ ಡಿ:(ಹೊಳೇನರಸೀಪುರ) ಮಾನ್ಯ ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಬಂದೀಖಾನೆಗಳನ್ನೊಳಗೊಂಡಂತೆ ರಾಜ್ಯದಲ್ಲಿರುವ ಒಟ್ಟು ಬಂದೀಖಾನೆಗಳ ಸಂಖ್ಯೆ ಎಷ್ಟು? (ಪೂರ್ಣ ಮಾಹಿತಿ ನೀಡುವುದು).

ಆ) ಬಂದೀಖಾನೆಗಳಲ್ಲಿ ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ನಿರಪರಾಧಿಗಳು ವಿಚಾರಣಾಧೀನ ಕೈದಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇವರುಗಳ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ ಕತ್ತಿ(ತೋಟಗಾರಿಕೆ ಹಾಗೂ ಬಂದೀಖಾನೆ ಸಚಿವರು):

ಅ) ರಾಜ್ಯದಲ್ಲಿ 8 ಕೇಂದ್ರ ಕಾರಾಗೃಹಗಳನ್ನೊಳಗೊಂಡಂತೆ ಒಟ್ಟು 102 ಕಾರಾಗೃಹಗಳಿವೆ; ಅವುಗಳು–

ಕೇಂದ್ರ ಕಾರಾಗೃಹಗಳು	– 8
ಜಿಲ್ಲಾ ಕಾರಾಗೃಹಗಳು	– 15
ಜಿಲ್ಲಾ ಕೇಂದ್ರ ಉಪ ಕಾರಾಗೃಹಗಳು	– 4
ವಿಶೇಷ ಉಪ ಕಾರಾಗೃಹಗಳು	– 2
ಬಯಲು ಬಂದೀಖಾನೆ	– 1
ತರುಣ ಬಂದೀಖಾನೆ	– 1
ಬಾಲಾಪರಾಧಿ ಶಾಲೆ	– 1
ತಾಲ್ಲೂಕು ಉಪ ಕಾರಾಗೃಹಗಳು	– 70

ಆ) ದಿನಾಂಕ 31.5.2010ರಲ್ಲಿದ್ದಂತೆ ರಾಜ್ಯದ ಎಲ್ಲಾ ಬಂದೀಖಾನೆಗಳಲ್ಲಿ ಒಟ್ಟು 9680 ವಿಚಾರಣಾಧೀನ ಖೈದಿಗಳು ದಾಖಲಾಗಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

ಇ) –ಇಲ್ಲ–

ಬಂದಿಗಳು ಘನ ನ್ಯಾಯಾಲಯದ ಆದೇಶದ ಮೇರೆಗೆ ಬಂದನಕ್ಕೊಳಗಾಗುತ್ತಾರೆ.

ಅನುಬಂಧ
ದಿನಾಂಕ: 31–05–2010 ರಲ್ಲಿದ್ದಂತೆ ವಿವಿಧ ಕಾರಾಗೃಹಗಳ ದಾಖಲಿದ್ದ ವಿಚಾರಣಾ ಬಂದಿಗಳ ಸಂಖ್ಯೆ (ಜಿಲ್ಲಾವಾರು ಮಾಹಿತಿ)

ಕ್ರ ಸ ಂ.	ಜಿಲ್ಲಾವಾರು ಕಾರಾಗೃಹಗಳು	
1	**ಬೆಂಗಳೂರು ಜಿಲ್ಲೆ**	**ದಿನಾಂಕ: 31–05–2010ರಲ್ಲಿದ್ದಂತೆ ದಾಖಲಿದ್ದ ವಿಚಾರಣಾ ಬಂದಿಗಳು ಸಂಖ್ಯೆ**
1	ಕೇಂದ್ರ ಕಾರಾಗೃಹ ಬೆಂಗಳೂರು	2826
2	ತಾಲ್ಲೂಕು ಉಪ ಕಾರಾಗೃಹ ದೊಡ್ಡಬಳ್ಳಾಪುರ	ಕಾರ್ಯನಿರ್ವಹಿಸುತ್ತಿಲ್ಲ
3	ಬಯಲು ಬಂದೀಖಾನೆ ಕೋರಮಂಗಲ	0
2	**ಬಾಗಲಕೋಟೆ ಜಿಲ್ಲೆ**	
4	ಜಿಲ್ಲಾ ಕಾರಾಗೃಹ ಬಾಗಲಕೋಟೆ	56
5	ತಾಲ್ಲೂಕು ಉಪ ಕಾರಾಗೃಹ ಬಾದಾಮಿ	11
6	ತಾಲ್ಲೂಕು ಉಪ ಕಾರಾಗೃಹ ಹುನಗುಂದ	ಕಾರ್ಯನಿರ್ವಹಿಸುತ್ತಿಲ್ಲ
7	ತಾಲ್ಲೂಕು ಉಪ ಕಾರಾಗೃಹ ಜಮಖಂಡಿ	65
3	**ಬೆಳಗಾವಿ ಜಿಲ್ಲೆ**	
8	ಕೇಂದ್ರ ಕಾರಾಗೃಹ ಬೆಳಗಾವಿ	394
9	ತಾಲ್ಲೂಕು ಉಪ ಕಾರಾಗೃಹ ಅಥಣಿ	17
10	ತಾಲ್ಲೂಕು ಉಪ ಕಾರಾಗೃಹ ಬೈಲಹೊಂಗಲ	23
11	ತಾಲ್ಲೂಕು ಉಪ ಕಾರಾಗೃಹ ಚಿಕ್ಕೋಡಿ	32
12	ತಾಲ್ಲೂಕು ಉಪ ಕಾರಾಗೃಹ ಗೋಕಾಕ್	69
13	ತಾಲ್ಲೂಕು ಉಪ ಕಾರಾಗೃಹ ರಾಯಭಾಗ	ಕಾರ್ಯನಿರ್ವಹಿಸುತ್ತಿಲ್ಲ
14	ತಾಲ್ಲೂಕು ಉಪ ಕಾರಾಗೃಹ ರಾಮದುರ್ಗ	0
15	ತಾಲ್ಲೂಕು ಉಪ ಕಾರಾಗೃಹ ಸೌದತ್ತಿ	20

16	ತಾಲ್ಲೂಕು ಉಪ ಕಾರಾಗೃಹ ಹುಕ್ಕೇರಿ	27
17	ತಾಲ್ಲೂಕು ಉಪ ಕಾರಾಗೃಹ ಖಾನಾಪುರ	ಕಾರ್ಯನಿರ್ವಹಿಸುತ್ತಿಲ್ಲ
4	**ಬಳ್ಳಾರಿ ಜಿಲ್ಲೆ**	
18	ಕೇಂದ್ರ ಕಾರಾಗೃಹ ಬಳ್ಳಾರಿ	405
19	ತಾಲ್ಲೂಕು ಉಪ ಕಾರಾಗೃಹ ಹೊಸಪೇಟೆ	73
20	ತಾಲ್ಲೂಕು ಉಪ ಕಾರಾಗೃಹ ಕೂಡ್ಲಗಿ	ಕಾರ್ಯನಿರ್ವಹಿಸುತ್ತಿಲ್ಲ
21	ತಾಲ್ಲೂಕು ಉಪ ಕಾರಾಗೃಹ ಹಡಗಲಿ	30
5	**ಬೀದರ್ ಜಿಲ್ಲೆ**	
22	ಜಿಲ್ಲಾ ಕಾರಾಗೃಹ ಬೀದರ್	143
23	ತಾಲ್ಲೂಕು ಉಪ ಕಾರಾಗೃಹ ಹುಮನಾಬಾದ್	30
24	ತಾಲ್ಲೂಕು ಉಪ ಕಾರಾಗೃಹ ಔರಾದ್	15
6	**ಬಿಜಾಪುರ ಜಿಲ್ಲೆ**	
25	ಕೇಂದ್ರ ಕಾರಾಗೃಹ ಬಿಜಾಪುರ	290
26	ತಾಲ್ಲೂಕು ಉಪ ಕಾರಾಗೃಹ ಬಾಗೇವಾಡಿ	ಕಾರ್ಯನಿರ್ವಹಿಸುತ್ತಿಲ್ಲ
27	ತಾಲ್ಲೂಕು ಉಪ ಕಾರಾಗೃಹ ಇಂಡಿ	ಕಾರ್ಯನಿರ್ವಹಿಸುತ್ತಿಲ್ಲ
28	ತಾಲ್ಲೂಕು ಉಪ ಕಾರಾಗೃಹ ಮುದ್ದೇಬಿಹಾಳ	ಕಾರ್ಯನಿರ್ವಹಿಸುತ್ತಿಲ್ಲ
29	ತಾಲ್ಲೂಕು ಉಪ ಕಾರಾಗೃಹ ಸಿಂದಗಿ	ಕಾರ್ಯನಿರ್ವಹಿಸುತ್ತಿಲ್ಲ
7	**ಚಾಮರಾಜನಗರ ಜಿಲ್ಲೆ**	
30	ಜಿಲ್ಲಾ ಕಾರಾಗೃಹ ಚಾಮರಾಜನಗರ	70
31	ತಾಲ್ಲೂಕು ಉಪ ಕಾರಾಗೃಹ ಕೊಳ್ಳೇಗಾಲ	21
8	ಚಿಕ್ಕಮಗಳೂರು ಜಿಲ್ಲೆ	

೦-೨೫೫-೪೫

32	ಜಿಲ್ಲಾ ಕೇಂದ್ರ ಉಪ ಕಾರಾಗೃಹ ಚಿಕ್ಕಮಗಳೂರು	119
33	ತಾಲ್ಲೂಕು ಉಪ ಕಾರಾಗೃಹ ನರಸಿಂಹರಾಜಪುರ	15
34	ತಾಲ್ಲೂಕು ಉಪ ಕಾರಾಗೃಹ ತರೀಕೆರೆ	7
35	ತಾಲ್ಲೂಕು ಉಪ ಕಾರಾಗೃಹ ಕಡೂರು	14
9	**ದಾವಣಗೆರೆ ಜಿಲ್ಲೆ**	
36	ವಿಶೇಷ ಉಪ ಕಾರಾಗೃಹ ದಾವಣಗೆರೆ	145
37	ತಾಲ್ಲೂಕು ಉಪ ಕಾರಾಗೃಹ ಹರಪನಹಳ್ಳಿ	ಕಾರ್ಯನಿರ್ವಹಿಸುತ್ತಿಲ್ಲ
10	ಧಾರವಾಡ ಜಿಲ್ಲೆ	
38	ಕೇಂದ್ರ ಕಾರಾಗೃಹ ಧಾರವಾಡ	251
39	ತರುಣ ಬಂದೀಖಾನೆ ಧಾರವಾಡ	0
40	ಬಾಲಾಪರಾಧಿ ಶಾಲೆ ಧಾರವಾಡ	0
41	ತಾಲ್ಲೂಕು ಉಪ ಕಾರಾಗೃಹ ಹುಬ್ಬಳ್ಳಿ	105
42	ತಾಲ್ಲೂಕು ಉಪ ಕಾರಾಗೃಹ ಕುಂದಗೋಳ	ಕಾರ್ಯನಿರ್ವಹಿಸುತ್ತಿಲ್ಲ
43	ತಾಲ್ಲೂಕು ಉಪ ಕಾರಾಗೃಹ ನವಲಗುಂದ	ಕಾರ್ಯನಿರ್ವಹಿಸುತ್ತಿಲ್ಲ
11	**ಗದಗ ಜಿಲ್ಲೆ**	
44	ತಾಲ್ಲೂಕು ಉಪ ಕಾರಾಗೃಹ ಗದಗ	77
45	ತಾಲ್ಲೂಕು ಉಪ ಕಾರಾಗೃಹ ರೋಣ	6
46	ತಾಲ್ಲೂಕು ಉಪ ಕಾರಾಗೃಹ ಶಿರಹಟ್ಟಿ	ಕಾರ್ಯನಿರ್ವಹಿಸುತ್ತಿಲ್ಲ
12	**ಗುಲ್ಬರ್ಗಾ ಜಿಲ್ಲೆ**	
47	ಕೇಂದ್ರ ಕಾರಾಗೃಹ ಗುಲ್ಬರ್ಗಾ	546
48	ತಾಲ್ಲೂಕು ಉಪ ಕಾರಾಗೃಹ ಆಳಂದ	19
49	ತಾಲ್ಲೂಕು ಉಪ ಕಾರಾಗೃಹ ಚಿಂಚೋಳಿ	ಕಾರ್ಯನಿರ್ವಹಿಸುತ್ತಿಲ್ಲ

50	ತಾಲ್ಲೂಕು ಉಪ ಕಾರಾಗೃಹ ಸೇಡಂ	ಕಾರ್ಯನಿರ್ವಹಿಸುತ್ತಿಲ್ಲ
51	ತಾಲ್ಲೂಕು ಉಪ ಕಾರಾಗೃಹ ಸುರಪುರ	0
52	ತಾಲ್ಲೂಕು ಉಪ ಕಾರಾಗೃಹ ಯಾದಗೀರ್	40
13	ಹಾಸನ ಜಿಲ್ಲೆ	
53	ಜಿಲ್ಲಾ ಕೇಂದ್ರ ಉಪ ಕಾರಾಗೃಹ ಹಾಸನ	364
54	ತಾಲ್ಲೂಕು ಉಪ ಕಾರಾಗೃಹ ಅರಸೀಕರೆ	25
55	ತಾಲ್ಲೂಕು ಉಪ ಕಾರಾಗೃಹ ಹೊಳೆನರಸೀಪುರ	ಕಾರ್ಯನಿರ್ವಹಿಸುತ್ತಿಲ್ಲ
56	ತಾಲ್ಲೂಕು ಉಪ ಕಾರಾಗೃಹ ಸಕಲೇಶಪುರ	40
14	**ಹಾವೇರಿ ಜಿಲ್ಲೆ**	
57	ಜಿಲ್ಲಾ ಕಾರಾಗೃಹ ಹಾವೇರಿ	69
58	ತಾಲ್ಲೂಕು ಉಪ ಕಾರಾಗೃಹ ಹಿರೇಕೂರು	ಕಾರ್ಯನಿರ್ವಹಿಸುತ್ತಿಲ್ಲ
59	ತಾಲ್ಲೂಕು ಉಪ ಕಾರಾಗೃಹ ರಾಣೆಬೆನ್ನೂರು	25
60	ತಾಲ್ಲೂಕು ಉಪ ಕಾರಾಗೃಹ ಶಿಗ್ಗಾಂವ್	11
61	ತಾಲ್ಲೂಕು ಉಪ ಕಾರಾಗೃಹ ಹಾನಗಲ್	10
15	**ಉತ್ತರ ಕನ್ನಡ ಜಿಲ್ಲೆ**	
62	ಜಿಲ್ಲಾ ಕಾರಾಗೃಹ ಕಾರವಾರ	99
63	ತಾಲ್ಲೂಕು ಉಪ ಕಾರಾಗೃಹ ಅಂಕೋಲ	ಕಾರ್ಯನಿರ್ವಹಿಸುತ್ತಿಲ್ಲ
64	ತಾಲ್ಲೂಕು ಉಪ ಕಾರಾಗೃಹ ಬಟ್ಕಳ	2
65	ತಾಲ್ಲುಕು ಉಪ ಕಾರಾಗೃಹ ಹಳಿಯಾಳ	ಕಾರ್ಯನಿರ್ವಹಿಸುತ್ತಿಲ್ಲ
66	ತಾಲ್ಲೂಕು ಉಪ ಕಾರಾಗೃಹ ಹೊನ್ನಾವರ	ಕಾರ್ಯನಿರ್ವಹಿಸುತ್ತಿಲ್ಲ
67	ತಾಲ್ಲೂಕು ಉಪ ಕಾರಾಗೃಹ ಕುಮಟಾ	ಕಾರ್ಯನಿರ್ವಹಿಸುತ್ತಿಲ್ಲ
68	ತಾಲ್ಲೂಕು ಉಪ ಕಾರಾಗೃಹ ಸಿದ್ದಾಪುರ	2
69	ತಾಲ್ಲೂಕು ಉಪ ಕಾರಾಗೃಹ ಶಿರಸಿ	ಕಾರ್ಯನಿರ್ವಹಿಸುತ್ತಿಲ್ಲ
70	ತಾಲ್ಲೂಕು ಉಪ ಕಾರಾಗೃಹ ಯಲ್ಲಾಪುರ	5

16	ಕೋಲಾರ ಜಿಲ್ಲೆ	
71	ಜಿಲ್ಲಾ ಕೇಂದ್ರ ಉಪ ಕಾರಾಗೃಹ ಕೋಲಾರ	144
72	ವಿಶೇಷ ಉಪ ಕಾರಾಗೃಹ ಕೆ.ಜಿ.ಎಫ್	49
17	**ಕೊಡಗು ಜಿಲ್ಲೆ**	
73	ಜಿಲ್ಲಾ ಕಾರಾಗೃಹ ಮಡಿಕೇರಿ	182
74	ತಾಲ್ಲೂಕು ಉಪ ಕಾರಾಗೃಹ ವಿರಾಜಪೇಟೆ	9
18	**ದಕ್ಷಿಣ ಕನ್ನಡ ಜಿಲ್ಲೆ**	
75	ಜಿಲ್ಲಾ ಕಾರಾಗೃಹ ಮಂಗಳೂರು	239
76	ತಾಲ್ಲೂಕು ಉಪ ಕಾರಾಗೃಹ ಬಂಟ್ವಾಲ	ಕಾರ್ಯನಿರ್ವಹಿಸುತ್ತಿಲ್ಲ
77	ತಾಲ್ಲೂಕು ಉಪ ಕಾರಾಗೃಹ ಕಾರ್ಕಳ	17
78	ತಾಲ್ಲೂಕು ಉಪ ಕಾರಾಗೃಹ ಪುತ್ತೂರು	ಕಾರ್ಯನಿರ್ವಹಿಸುತ್ತಿಲ್ಲ
19	**ಮೈಸೂರು ಜಿಲ್ಲೆ**	
79	ಕೇಂದ್ರ ಕಾರಾಗೃಹ ಮೈಸೂರು	439
80	ತಾಲ್ಲೂಕು ಉಪ ಕಾರಾಗೃಹ ಹುಣಸೂರು	ಕಾರ್ಯನಿರ್ವಹಿಸುತ್ತಿಲ್ಲ
81	ತಾಲ್ಲೂಕು ಉಪ ಕಾರಾಗೃಹ ನಂಜನಗೂಡು	58
82	ತಾಲ್ಲೂಕು ಉಪ ಕಾರಾಗೃಹ ಕೆ.ಆರ್.ನಗರ	97
20	**ರಾಯಚೂರು ಜಿಲ್ಲೆ**	
83	ಜಿಲ್ಲಾ ಕಾರಾಗೃಹ ರಾಯಚೂರು	167
84	ತಾಲ್ಲೂಕು ಉಪ ಕಾರಾಗೃಹ ದೇವದುರ್ಗ	5
85	ತಾಲ್ಲೂಕು ಉಪ ಕಾರಾಗೃಹ ಲಿಂಗಸೂಗೂರು	27
86	ತಾಲ್ಲೂಕು ಉಪ ಕಾರಾಗೃಹ ಮಾನ್ವಿ	28
21	**ಕೊಪ್ಪಳ ಜಿಲ್ಲೆ**	
87	ಜಿಲ್ಲಾ ಕಾರಾಗೃಹ ಕೊಪ್ಪಳ	22

88	ತಾಲ್ಲೂಕು ಉಪ ಕಾರಾಗೃಹ ಗಂಗಾವತಿ	15
89	ತಾಲ್ಲೂಕು ಉಪ ಕಾರಾಗೃಹ ಕುಷ್ಟಗಿ	ಕಾರ್ಯನಿರ್ವಹಿಸುತ್ತಿಲ್ಲ
22	ಶಿವಮೊಗ್ಗ ಜಿಲ್ಲೆ	
90	ಜಿಲ್ಲಾ ಕಾರಾಗೃಹ ಶಿವಮೊಗ್ಗ	305
91	ತಾಲ್ಲೂಕು ಉಪ ಕಾರಾಗೃಹ ಸಾಗರ	ರೀಪೇರಿಯಲ್ಲಿದೆ
23	**ತುಮಕೂರು ಜಿಲ್ಲೆ**	
92	ಜಿಲ್ಲಾ ಕಾರಾಗೃಹ ತುಮಕೂರು	220
93	ಮಹಿಳಾ ಕೇಂದ್ರ ಕಾರಾಗೃಹ ತುಮಕೂರು	ಕಾರ್ಯಾರಂಭಿಸಿಲ್ಲ
94	ತಾಲ್ಲೂಕು ಉಪ ಕಾರಾಗೃಹ ಮಧುಗಿರಿ	60
95	ತಾಲ್ಲೂಕು ಉಪ ಕಾರಾಗೃಹ ತಿಪಟೂರು	33
24	**ಚಿತ್ರದುರ್ಗ ಜಿಲ್ಲೆ**	
96	ಜಿಲ್ಲಾ ಕಾರಾಗೃಹ ಚಿತ್ರದುರ್ಗ	166
25	**ಉಡುಪಿ ಜಿಲ್ಲೆ**	
97	ಜಿಲ್ಲಾ ಕಾರಾಗೃಹ ಉಡುಪಿ	73
98	ತಾಲ್ಲೂಕು ಉಪ ಕಾರಾಗೃಹ ಕುಂದಾಪುರ	ಕಾರ್ಯನಿರ್ವಹಿಸುತ್ತಿಲ್ಲ
26	**ಮಂಡ್ಯ ಜಿಲ್ಲೆ**	
99	ಜಿಲ್ಲಾ ಕೇಂದ್ರ ಉಪ ಕಾರಾಗೃಹ ಮಂಡ್ಯ	402
27	**ರಾಮನಗರ ಜಿಲ್ಲೆ**	
100	ಜಿಲ್ಲಾ ಕಾರಾಗೃಹ ರಾಮನಗರ	184
28	**ಚಿಕ್ಕಬಳ್ಳಾಪುರ ಜಿಲ್ಲೆ**	
101	ಜಿಲ್ಲಾ ಕಾರಾಗೃಹ ಚಿಕ್ಕಬಳ್ಳಾಪುರ	74
10	ತಾಲ್ಲೂಕು ಉಪ ಕಾರಾಗೃಹ ಚಿಂತಾಮಣಿ	52

2		
	ಒಟ್ಟು	9680

ಬಿ ಓ ಟಿ ರಸ್ತೆ ತೊಂದರೆ

211(400) ಶ್ರೀ ಶಿವಲಿಂಗೇಗೌಡ ಕೆಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ B.O.T. ಆಧಾರದ ಮೇಲೆ ರಸ್ತೆ ಮಂಜೂರಾತಿ ಆಗಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ.ಲೋಇ 207 ಇಎಪಿ 2007, ದಿನಾಂಕ 06–12–2008ರಲ್ಲಿ ಕರಡು concession agreementಗೆ ಅನುಮೋದನೆ ನೀಡಲಾಗಿರುತ್ತದೆ.

ಆ) ಸರ್ಕಾರದಿಂದ ಅನುಮೋದನೆ ಪಡೆದು ಮೂರು ಬಾರಿ ಟೆಂಡರ್ ಆಹ್ವಾನಿಸಿದ್ದು, ಯಾವುದೇ ರಿಯಾಯಿತಿದಾರರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಆದಾಗ್ಯೂ 4ನೇ ಟೆಂಡರ್‌ನ್ನು ಈಗಾಗಲೇ ಆಹ್ವಾನಿಸಿದ್ದು, ದಿನಾಂಕ 05–07–2010ರಂದು ಆಸಕ್ತಿವುಳ್ಳ ರಿಯಾಯಿತಿದಾರರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗಧಿಪಡಿಸಲಾಗಿರುತ್ತದೆ.

ಕಾಮಗಾರಿಗಳಿಗೆ ಹಣ ಪಾವತಿ

212(401) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 12ನೇ ಹಣಕಾಸು ಯೋಜನೆಯಲ್ಲಿ ಬಾಕಿ ಎರುವ ಕಾಮಗಾರಿಗಳ ಬಿಲ್ಲಿನ ಮೊತ್ತ ಎಷ್ಟು?